ಮನೆಗೆ ಬಂದನೆಂದರೆ ಶಂಕರ ಹಚ್ಚಿದ ಅವಲಕ್ಕಿಯ ಜೊತೆ ಒಂದಿಷ್ಟು ಬಿಸಿ ಚಹ ಕುಡಿದು ಹೊರಗೆ ಸೋಫಾದಲ್ಲಿ ಕೂತು ತನ್ನ ಫೋನ್‌ನಲ್ಲೇ ಅಗತ್ಯದ ಕೆಲಸ ಪೂರೈಸುತ್ತಿದ್ದ. ಈ ಫೇಸ್‌ಬುಕ್ ಎಂಬ ವಿಧಾನ ನಮ್ಮ ಮನೆ ಪ್ರವೇಶಿಸುವದಕ್ಕೆ ಮುಂಚೆ ದಿನಾ ಸಂಜೆ ನೃಪತುಂಗ ಬೆಟ್ಟಕ್ಕೋ, ಉಣಕಲ್ ಕೆರೆಗೋ, ಗ್ಲಾಸ್‌ಹೌಸ್ ಗಾರ್ಡನ್ನಿಗೋ ಅಥವಾ ಯುಮಾಲ್, ಬಿಗ್ ಬಝಾರ್‌ಗಳಿಗೋ ಕರೆದೊಯ್ಯುವಂತೆ ಸರಸ್ವತಿ ಹಟಮಾಡುತ್ತಿದ್ದಳು, ಅತ್ತ ಜೇಬಿಗೆ ಕತ್ತರಿಯೂ ಇಲ್ಲ, ಇತ್ತ ಸುಸ್ತಾಗಿ ಮನೆಗೆ ಬಂದು ಮತ್ತೆ ಹೊರಹೋಗುವ ಬೇಸರವೂ ಇಲ್ಲ, ಇಂಟರ್ ನೆಟ್‌ಗಾಗಿ ತಿಂಗಳೂಪ್ಪತ್ತಿಗೆ ಆನ್ರೂರರ ಕರೆನ್ಸೀ ಹಾಕಿದರೆ ತೀರಿತು, ಥ್ಯಾಂಕ್ ಗಾಡ್ ಅಲ್ಲಲ್ಲ ಥ್ಯಾಂಕ್ಸ್ ಫೇಸ್‌ಬುಕ್ ಅಂದುಕೊಳ್ಳುತ್ತ ಶಂಕರ ಈಗ ಆರಾಮಾಗಿರತೊಡಗಿದ್ದ. ನಮಗಿನ್ನೂ ಮಕ್ಕಳಾಗಿಲ್ಲ ಎಂಬ ಮಾತುಗಳನ್ನು ಬೇರೆಯವರಿಂದ ಪದೇಪದೇ ಹೇಳಿಸಿಕೊಂಡು, ಅದನ್ನೇ ನೆನೆಸಿಕೊಂಡು ಕೊರಗುತ್ತ, ದಿನಕ್ಕೊಂದು ರಾದ್ಧಾಂತ ಎಬ್ಬಿಸುತ್ತಿದ್ದ ತನ್ನ ಸರಸ್ವತಿ ಇದ್ದಲ್ಲೇ ಇವೆಲ್ಲದರಿಂದ ಬಿಡುಗಡೆಗೊಂಡು, ಹೊಸತೇ ಆದೊಂದು ವಿಶಾಲ ಲೋಕಕ್ಕೆ ಸೇರ್ಪಡೆಯಾಗಿದ್ದು ಶಂಕರನಿಗಂತೂ ನೆಮ್ಮದಿ ತಂದಿತ್ತು.

★★★

ಹೀಗಿರುವಾಗ ಒಮ್ಮೆ ಎಂಬಿಎ ಕಲಿಯುತ್ತಿದ್ದ ರಮ್ಯಶ್ರೀ ಎಂಬ ಹುಡುಗಿ 'ಎರಡೂ ಪಾದಗಳ ಹಿಮ್ಮಡಿ ಒಡೆದಿದ್ದರೆ ದಿನವೂ ರಾತ್ರಿ ಮಲಗುವಾಗ ಹತ್ತು ನಿಮಿಷ ನಿಮ್ಮ ಪಾದಗಳನ್ನು ಬಿಸಿ ನೀರಿನಲ್ಲಿ ಅದ್ದಿಟ್ಟು ನಂತರ ಚೆನ್ನಾಗಿ ಒರೆಸಿಕೊಂಡು ಮಲಗಿರಿ, ಮೂರು ತಿಂಗಳಲ್ಲಿ ನಿಮ್ಮ ಸುಂದರ ಹಿಮ್ಮಡಿಯ ಫೋಟೊ ತೆಗೆದು ನೀವು ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಮಾಡಬಹುದು' ಎಂದು ಬರೆದುಕೊಂಡಿದ್ದಳು. ಅವಳ ಟೈಮ್ ಲೈನ್ ತೆಗೆದು ನೋಡಿದರೆ, ಬರೀ ಇಂಥ ಹೆಲ್ತ್ ಟಿಪ್ಸ್‌ಗಳೇ ತುಂಬಿದ್ದವು. ಅವುಗಳಲ್ಲಿ ಕೆಲವೊಂದನ್ನು ಸರಸ್ವತಿ ಪ್ರಯೋಗ ಮಾಡಿ ನೋಡಿ, ಅವಳ ಇನ್ ಬಾಕ್ಸಿನಲ್ಲಿ ಥ್ಯಾಂಕ್ಸ್ ಎಂಬ ಸಂದೇಶ ಕೂಡ ರವಾನಿಸಿದ್ದಳು.

ಬುದ್ಧಿಯನ್ನು ಒಂದಿಷ್ಟೂ ಬೆಳೆಸದೆ ಬರೀ ದೇವರು, ದೇವಸ್ಥಾನಗಳ ಚಿತ್ರ ಹಾಕುತ್ತ ಕೂಡುವ ಸ್ನೇಹಿತರಿಗಿಂತ, ಅಯ್ಯಪ್ಪ ಮಂದಿರದಲ್ಲಿ ಯಾಕೆ ಮಹಿಳೆಯರಿಗೆ ಪ್ರವೇಶ ನಿಷೇಧಿಸಲಾಗಿದೆ? ಎಂಬ ಚರ್ಚೆ ಮಾಡುವ ಸತ್ಯಹರಿಶ್ಚಂದ್ರ, ಸರಸ್ವತಿಗೆ ಇಷ್ಟವಾಗತೊಡಗಿದ್ದ. ಗಾಂಧೀ ಜಯಂತಿಯ ದಿನ ಮೂರೇ ಮೂರು ಗೆರೆಗಳಲ್ಲಿ ಗಾಂಧಿಯನ್ನು ಮೂಡಿಸಿದ ಸತ್ಯ ಹರಿಶ್ಚಂದ್ರನಿಂದ ಸ್ಫೂರ್ತಿ ಪಡೆದು ಸರಸ್ವತಿ ತಾನೂ ಕೆಲ ದಿನ ರೇಖಾಚಿತ್ರ ಬಿಡಿಸಲು ಪ್ರಯತ್ನಿಸಿದ್ದಳು.

ಇವೆಲ್ಲದರಿಂದ ಹೊಸ ಉತ್ಸಾಹ ಉಕ್ಕಿದ ಸರಸ್ವತಿ ಈಗ ತನಗೆ ಬಾಲ್ಯದಲ್ಲಿ ಬರುತ್ತಿದ್ದ ಕಸೂತಿ ಕಲೆಯನ್ನು ಪುನಃ ಹೊಸದಾಗಿ ಆವಾಹಿಸಿಕೊಂಡು, ಆ ಕಲೆಯ ಕುರಿತು ದಿನಕ್ಕೊಂದು ಹೊಸ ಮಾಹಿತಿ ನೀಡಿ ತನ್ನ ಟೈಮ್ ಲೈನ್‌ನಲ್ಲಿ ವಿವರ ಹಾಕತೊಡಗಿದಳು. ತನಗೆ ಗೊತ್ತಿರುವ ಕಲೆಯನ್ನು ತನ್ನ ಸ್ನೇಹಬಳಗಕ್ಕೆ ಹೀಗೆ ಹಂಚುವಾಗ ಸರಸ್ವತಿಯಲ್ಲಿ ಒಂದು ರೀತಿಯ ಅವ್ಯಕ್ತ ಖುಷಿ ಆವರಿಸುವುದು. ಕೆಲವರು ಅದರ ಕುರಿತು ಉಪಯುಕ್ತ ಮಾಹಿತಿಯನ್ನೂ ಕೇಳುವರು. ಅದಕ್ಕೆಲ್ಲ ಉತ್ತರಿಸುವಾಗ ಸರಸ್ವತಿಗೆ ತಾನು ಟೀಚರ್ ಎಂಬ ಭಾವ ಮುತ್ತಿಕೊಳ್ಳುವುದು. ಇವಳಿಂದ ಮಾಹಿತಿ ಪಡೆದ ಆಯೇಶಾ ಎಂಬ ಒಬ್ಬ ಮಹಿಳೆ ತಾನೂ ಕಲಿತು ಹಾಕಿದ ಕಸೂತಿಯ ಫೋಟೊ ತೆಗೆದು ಅಪ್‌ಡೇಟ್ ಮಾಡಿ, 'ಕ್ರೆಡಿಟ್ ಸರಸ್ವತಿಯವರಿಗೆ' ಅಂತ ಟ್ಯಾಗ್ ಕೊಟ್ಟಿದ್ದಳು. ಅದನ್ನು ಕಂಡು ಸರಸ್ವತಿಗೆ ಎಂಥದೋ ಭಾವೋದ್ವೇಗ ಉಕ್ಕಿ ಕಣ್ಣು ತುಂಬಿ ಬಂದಿತ್ತು.

ಒಬ್ಬನಂತೂ 'ನೆಗಡಿಯಾದರೆ ನೀವು ಯಾವ ಕೈಯಲ್ಲಿ ಮೂಗನ್ನು